**All India Radio: Bangalore**
**National Bulletin In Kannada**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**14.05.2026 19.35 p.m.**

---

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ ಐದು ರಾಷ್ಟ್ರಗಳಿಗೆ ಭೇಟಿ - ನಾಳೆ ಯುಎಇಗೆ ಪ್ರಯಾಣ

೨. ಪ್ರಧಾನಿ ಅವರೊಂದಿಗೆ ಬ್ರಿಕ್ಸ್ ವಿದೇಶಾಂಗ ಸಚಿವರ ಮಾತುಕತೆ

೩. ಅಮೆರಿಕಾ-ಚೀನಾ ಅಧ್ಯಕ್ಷರ ಸಭೆ; ಹೊರ್ಮುಜ್ ಜಲಸಂಧಿ ಇಂಧನ ಸಾಗಾಟಕ್ಕೆ ಮುಕ್ತವಾಗಿರಲು ಸಹಮತ

೪. ೧೬ ರಾಜ್ಯ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ - ಚುನಾವಣಾ ಆಯೋಗದ ಪ್ರಕಟಣೆ

೫. ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್; ಪಿ.ವಿ.ಸಿಂಧು ಹಾಗೂ ಸಾತ್ವಿಕ್-ಚಿರಾಗ್ ಶೆಟ್ಟಿ ಜೋಡಿ ಕ್ವಾರ್ಟರ್ ಫೈನಲ್‌ಗೆ

---

ಪ್ರಧಾನಿ ನರೇಂದ್ರ ಮೋದಿ ನಾಳೆಯಿಂದ ಆರು ದಿನಗಳ ಕಾಲ ಯುನೈಟೆಡ್ ಅರಬ್ ಎಮಿರೇಟ್ಸ್-ಯುಎಇ, ನೆದರ್ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿಗೆ ಭೇಟಿ ನೀಡಲಿದ್ದಾರೆ.

ಈ ಕುರಿತು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಸಿ.ಬಿ.ಜಾರ್ಜ್ ಮಾಹಿತಿ ನೀಡಿದ್ದಾರೆ.

ತಮ್ಮ ಐದು ರಾಷ್ಟ್ರಗಳ ಭೇಟಿಯ ಮೊದಲ ಹಂತದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ನಾಳೆ ಯುಎಇ ತಲುಪಲಿದ್ದಾರೆ. ಅಲ್ಲಿ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರನ್ನು ಭೇಟಿ ಮಾಡಲಿದ್ದಾರೆ ಎಂದರು.

ಉಭಯ ನಾಯಕರು ದ್ವಿಪಕ್ಷೀಯ ಸಹಕಾರದ ಬಗ್ಗೆ, ವಿಶೇಷವಾಗಿ ಇಂಧನ ಸಹಕಾರದ ಬಗ್ಗೆ ಹಾಗೂ ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ ಎಂದು ಅವರು ತಿಳಿಸಿದರು.

---

ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಇಂದು ಬ್ರಿಕ್ಸ್ ವಿದೇಶಾಂಗ ಸಚಿವರೊಂದಿಗೆ ಸಭೆ ನಡೆಸಿದರು.

ರಷ್ಯಾದ ಸರ್ಗೆ ಲ್ಯಾಬ್ ರೌವ್, ಇರಾನಿನ ಅಬ್ಬಾಸ್ ಅರ್ಗಚ್ಚಿ, ದಕ್ಷಿಣ ಆಫ್ರಿಕಾದ ರೊನಾಲ್ಡ್ ಲೆಮೊಲಾ ಹಾಗೂ ಬ್ರೆಜಿಲ್‌ನ ಮೌರೊ ವಿಯೆರಾ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಸಮಾಲೋಚಿಸಿದರು.

ನವದೆಹಲಿಯಲ್ಲಿ ನಡೆಯುತ್ತಿರುವ ಬ್ರಿಕ್ಸ್ ವಿದೇಶಾಂಗ ಸಚಿವರುಗಳ ಸಮಾವೇಶದ ಹಿನ್ನೆಲೆಯಲ್ಲಿ ಈ ಸಭೆ ನಡೆಯಿತು.

ಇದಕ್ಕೂ ಮುನ್ನ ವಿದೇಶಾಂಗ ಖಾತೆ ಸಚಿವ ಡಾ.ಎಸ್.ಜೈಶಂಕರ್ ಬ್ರಿಕ್ಸ್ ಸಭೆಯಲ್ಲಿ ಮಾತನಾಡಿ, ಜಾಗತಿಕ ಪರಿಸ್ಥಿತಿಯಲ್ಲಿ ಶಾಂತಿ ಹಾಗೂ ಸುಭದ್ರತೆ ಬಹು ಮುಖ್ಯವಾಗಿದೆ. ಇತ್ತೀಚಿನ ಸಂಘರ್ಷಗಳು ಮಾತುಕತೆ ಹಾಗೂ ರಾಜತಾಂತ್ರಿಕ ನಿರ್ವಹಣೆಯೇ ಅತ್ಯುತ್ತಮ ಪರಿಹಾರ ಎಂಬುದನ್ನು ಒತ್ತಿ ಹೇಳಿವೆ ಎಂದರು.

ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸಂಘಟಿತ ಸಹಕಾರ ಅಗತ್ಯ ಎಂದು ಹೇಳಿದ ಡಾ.ಜೈಶಂಕರ್, ಪ್ರಸ್ತುತ ಸಂಘರ್ಷ ಹಾಗೂ ಆರ್ಥಿಕ ಅನಿಶ್ಚಿತತೆ ನಡುವೆ ಬ್ರಿಕ್ಸ್ ರಚನಾತ್ಮಕ ಪಾತ್ರ ವಹಿಸಬಲ್ಲದು ಎಂದರು.

ಧ್ವನಿ: ಜೈಶಂಕರ್

ಬ್ರಿಕ್ಸ್ ಸಮಾವೇಶ ನಾಳೆಯೂ ಮುಂದುವರೆಯಲಿದ್ದು, ಸಹಕಾರ ಮತ್ತು ಸುಸ್ಥಿರ ಅಭಿವೃದ್ಧಿ ಕುರಿತಾಗಿ ಅಧಿವೇಶನಗಳು ನಡೆಯಲಿವೆ.

---

ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಹಾಗೂ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಬೀಜಿಂಗ್‌ನಲ್ಲಿಂದು ಮಹತ್ವದ ಸಭೆ ನಡೆಸಿದರು. ವ್ಯಾಪಾರ, ತಂತ್ರಜ್ಞಾನ ಮತ್ತು ಪ್ರಾದೇಶಿಕ ಭದ್ರತೆ ಕುರಿತ ಸಂಘರ್ಷಯುತ ಬಿಗು ಪರಿಸ್ಥಿತಿ ನಡುವೆಯು ಉಭಯ ಧುರೀಣರು ಸಹಕಾರದ ಅಗತ್ಯವನ್ನು ಪ್ರತಿಪಾದಿಸಿದರು. ಟ್ರಂಪ್ ಅವರು ತಮ್ಮ ಎರಡನೇ ಅಧಿಕಾರವಾಧಿಯಲ್ಲಿ ಚೀನಾಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದೆ.

ಹೊರ್ಮುಜ್ ಜಲಸಂಧಿ ಸುಗಮ ಇಂಧನ ಸಾಗಾಟಕ್ಕೆ ಬೆಂಬಲವಾಗುವ ರೀತಿಯಲ್ಲೇ ಮುಕ್ತವಾಗಿಯೇ ಇರಬೇಕೆಂದು ಸಭೆಯಲ್ಲಿ ಸಹಮತಕ್ಕೆ ಬರಲಾಯಿತು. ಅಧ್ಯಕ್ಷ ಟ್ರಂಪ್, ಚೀನಾ ಅಧ್ಯಕ್ಷ ಕ್ಸಿ ಜೊತೆ ಉತ್ತಮ ಮಾತುಕತೆ ನಡೆಸಿದರು ಎಂದು ಶ್ವೇತಭವನದ ಮೂಲಗಳು ತಿಳಿಸಿವೆ.

ಸಭೆಯ ನಂತರ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಚೀನಾ ಅಧ್ಯಕ್ಷ, ಕ್ಸಿ ಜಿನ್‌ಪಿಂಗ್ ಚೀನಾ-ಅಮೆರಿಕಾ ಪ್ರತಿಸ್ಪರ್ಧಿಗಳಾಗದೆ, ಸಹಭಾಗಿತ್ವದಲ್ಲಿ ಮುಂದುವರೆಯಬೇಕೆನ್ನುವ ಬಗ್ಗೆ ಸಭೆಯಲ್ಲಿ ಪ್ರತಿಪಾದಿಸಲಾಯಿತು ಎಂದರು. ಉಭಯ ದೇಶಗಳ ನಡುವೆ ಭಿನ್ನಾಭಿಪ್ರಾಯಕ್ಕಿಂತ ಪರಸ್ಪರ ಹಿತಾಸಕ್ತಿಯ ವಿಚಾರಗಳೇ ಹೆಚ್ಚಿವೆ ಎಂದು ಹೇಳಿದ ಚೀನಾ ಅಧ್ಯಕ್ಷರು, ಈ ನಿಟ್ಟಿನಲ್ಲಿ ದ್ವಿಪಕ್ಷೀಯ ಸಂಬಂಧದಲ್ಲಿ ಹೊಸ ಅಧ್ಯಾಯ ತೆರೆಯಲು ಕರೆ ನೀಡಿದರು.

ಅಮೆರಿಕಾ ಅಧ್ಯಕ್ಷ ಟ್ರಂಪ್ ಕೂಡ ಸಕಾರಾತ್ಮಕ ನಿಲುವು ವ್ಯಕ್ತಪಡಿಸಿ, ಅಮೆರಿಕಾ-ಚೀನಾ ಸಂಬಂಧಗಳು ಹಿಂದೆಂದಿಗಿಂತ ಉತ್ತಮವಾಗಲಿವೆ ಎಂದರು. ಅಮೆರಿಕಾದ ಪ್ರಮುಖ ವ್ಯಾಪಾರ ಕಂಪನಿಗಳು ಹಾಗೂ ತಂತ್ರಜ್ಞಾನ ಕಂಪನಿಗಳು ತಮ್ಮ ನಿಯೋಗದಲ್ಲಿ ಇರುವುದನ್ನು ಉಲ್ಲೇಖಿಸಿದ ಟ್ರಂಪ್, ಚೀನಾದಲ್ಲಿ ವ್ಯಾಪಾರ ಮತ್ತು ಬಂಡವಾಳ ಹೂಡಿಕೆ ವಿಸ್ತರಿಸಲು ಅಮೆರಿಕಾ ಉತ್ಸುಕವಾಗಿದೆ ಎಂದರು.

---

ರಾಷ್ಟ್ರೀಯ ವಿಕೋಪ ಪ್ರತಿಕ್ರಿಯಾ ಪಡೆ-ಎನ್‌ಡಿಆರ್‌ಎಫ್, ಸಂಕಷ್ಟದ ಸಂದರ್ಭಗಳಲ್ಲಿ ಜನರ ನೆರವಿಗೆ ಧಾವಿಸುತ್ತಿದ್ದು, ಜನಾನುರಾಗಿಯಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಅವರು ಗಾಜಿಯಾಬಾದ್‌ನಲ್ಲಿಂದು ನಡೆದ ಎನ್‌ಡಿಆರ್‌ಎಫ್ ರಾಷ್ಟ್ರಪತಿಗಳ ವರ್ಣ ಪ್ರಶಸ್ತಿ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು. ಎನ್‌ಡಿಆರ್‌ಎಫ್ ಕಳೆದ ೨೦ ವರ್ಷಗಳಲ್ಲಿ ಪ್ರಕೃತಿ ವಿಕೋಪ ಹಾಗೂ ಸಂಕಷ್ಟದ ಸಂದರ್ಭಗಳಲ್ಲಿ ಜನರ ಸಹಾಯಕ್ಕೆ ಬರುತ್ತಿದ್ದು, ರಾಜ್ಯ ಹಾಗೂ ಪಂಚಾಯತ್ ಮಟ್ಟದಲ್ಲೂ ಸೇವೆ ಸಲ್ಲಿಸುತ್ತಿದೆ. ಈ ಕಾರ್ಯದಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್ ಸಾವಿರಾರು ಸಂಖ್ಯೆಯ ಆಪದ್ ಮಿತ್ರರ ಸೇವೆ ಬಳಸಲಾಗುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ವಿಕೋಪ ತಡೆ ಮೂಲ ಸೌಕರ್ಯ ಕ್ಷೇತ್ರದಲ್ಲಿ ಮುಂದಾಳತ್ವ ವಹಿಸಿದೆ. ವಿಕೋಪ ನಿರ್ವಹಣಾ ವಲಯದಲ್ಲಿ ಭಾರತ ನಿಸ್ಸಂಶಯವಾಗಿ ಜಾಗತಿಕ ನಾಯಕತ್ವ ಸ್ಥಾನದಲ್ಲಿದೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದರು.

---

ಚುನಾವಣಾ ಆಯೋಗ, ೧೬ ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ತೀವ್ರ ಪರಿಷ್ಕರಣೆ-ಎಸ್‌ಐಆರ್ ನಡೆಸುವುದಾಗಿ ಪ್ರಕಟಿಸಿದೆ.

ಪ್ರಸ್ತುತ ನಡೆಯುತ್ತಿರುವ ಮನೆಪಟ್ಟಿ, ಜನಗಣತಿ ಗಮನದಲ್ಲಿಟ್ಟುಕೊಂಡು ಮೂರನೇ ಹಂತದ ಮತಪಟ್ಟಿ ವಿಶೇಷ ಪರಿಷ್ಕರಣೆ ನಿಗದಿಪಡಿಸಲಾಗಿದೆ ಎಂದು ಆಯೋಗ ತಿಳಿಸಿದೆ.

ಕರ್ನಾಟಕ, ಆಂಧ್ರಪ್ರದೇಶ, ಅರುಣಾಚಲಪ್ರದೇಶ, ಹರಿಯಾಣ, ಜಾರ್ಖಂಡ್, ಮಹಾರಾಷ್ಟ್ರ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ಪಂಜಾಬ್, ಸಿಕ್ಕಿಂ, ತ್ರಿಪುರ, ತೆಲಂಗಾಣ ಮತ್ತು ಉತ್ತರಾಖಂಡಗಳಲ್ಲಿ ಮತಪಟ್ಟಿ ಪರಿಷ್ಕರಣೆ ನಡೆಯಲಿದೆ.

ಇದಲ್ಲದೇ, ದೆಹಲಿ, ಚಂಡೀಗಢ, ದಾದ್ರಾ ಮತ್ತು ನಗರ ಹವೇಲಿ ಹಾಗೂ ದಮನ್ ಮತ್ತು ದೀವ್ ಕೇಂದ್ರಾಡಳಿತ ಪ್ರದೇಶಗಳಲ್ಲೂ ಮತಪಟ್ಟಿ ಪರಿಷ್ಕರಣೆ ನಿಗದಿಯಾಗಿದೆ.

---

ಭಾರತೀಯ ಸೇನಾ ಪಡೆ ಮತ್ತು ನೌಕಾಪಡೆ ಅಂತರ ಸೇವಾ ಸಹಕಾರ ಬಲವರ್ಧನೆಗಾಗಿ ಇಂದು ಒಪ್ಪಂದವೊಂದಕ್ಕೆ ಸಹಿ ಹಾಕಿದೆ.

ಸೇನಾಪಡೆಯ ಪರವಾಗಿ ಲೆಫ್ಟಿನೆಂಟ್ ಜನರಲ್ ವಿ.ಪಿ.ಎಸ್.ಕೌಶಿಕ್ ಅಡ್ಜಂಟ್ ಜನರಲ್ ಹಾಗೂ ನೌಕಾಪಡೆಯ ಪರವಾಗಿ ಸಿಬ್ಬಂದಿ ಮುಖ್ಯಸ್ಥ ವೈಸ್ ಅಡ್ಮಿರಲ್ ಗುರುಚರಣ್ ಸಿಂಗ್ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿದರು.

ಅಂತರ ಸೇವಾ ಸಹಕಾರದ ಸಾಂಸ್ಥೀಕರಣ ಕಾರ್ಯಾಚರಣೆಗಳಲ್ಲಿ ಸಹಯೋಗ ಬಲವರ್ಧನೆ ಹಾಗೂ ಆಂತರಿಕ ವಿನ್ಯಾಸ ವಿಚಾರದಲ್ಲಿ ಸಮನ್ವಯತೆ ಮೊದಲಾದ ವಿಚಾರಗಳನ್ನು ಈ ಒಪ್ಪಂದ ಒಳಗೊಂಡಿದೆ.

---

ಭಾರತದ ಸಗಟು ಬೆಲೆ ಸೂಚ್ಯಂಕ, ಏಪ್ರಿಲ್ ತಿಂಗಳಲ್ಲಿ ಕಳೆದ ೪೨ ತಿಂಗಳಲ್ಲೇ ಅತ್ಯಧಿಕ ಎನಿಸಿದ ಶೇಕಡ ೮.೩ರ ಪ್ರಮಾಣ ತಲುಪಿದೆ. ಮಾರ್ಚ್ ತಿಂಗಳಲ್ಲಿ ಇದು ಶೇಕಡ ೩.೮೮ ರಷ್ಟಿತ್ತು.

ಖನಿಜ ತೈಲ ಬೆಲೆಯಲ್ಲಿನ ಹೆಚ್ಚಳ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮೂಲ ಲೋಹಗಳು, ತಯಾರಿಕಾ ಉತ್ಪನ್ನಗಳು ಹಾಗೂ ಆಹಾರೇತರ ವಸ್ತುಗಳ ಬೆಲೆ ಹೆಚ್ಚಳ, ಸೂಚ್ಯಂಕ

ಏರಿಕೆಗೆ ಕಾರಣವಾಗಿದೆ ಎಂದು ವಾಣಿಜ್ಯೋದ್ಯಮ ಸಚಿವಾಲಯ ಬಿಡುಗಡೆ ಮಾಡಿದ ದತ್ತಾಂಶಗಳಿಂದ ವ್ಯಕ್ತವಾಗಿದೆ.

_______________________

ಒಮಾನ್‌ನ ಕರಾವಳಿಯಲ್ಲಿ ಭಾರತೀಯ ಧ್ವಜದ ನೌಕೆ ಮೇಲೆ ನಿನ್ನೆ ನಡೆದ ದಾಳಿ ಬಗ್ಗೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಇದು ಸಹಿಸಿಕೊಳ್ಳಲಾಗದ ವಿಚಾರವಾಗಿದೆ ಎಂದು ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ವಾಣಿಜ್ಯ ಹಾಗೂ ನಾಗರಿಕ ನೌಕೆಗಳನ್ನು ಗುರಿಯಾಗಿ ಇರಿಸಿಕೊಳ್ಳಲಾಗುತ್ತಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ನಿನ್ನೆಯ ದಾಳಿಯಲ್ಲಿ ಭಾರತೀಯ ನೌಕೆಯಲ್ಲಿದ್ದ ಎಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ತಿಳಿಸಿರುವ ಜೈಸ್ವಾಲ್, ಅವರನ್ನು ರಕ್ಷಿಸಿರುವುದಕ್ಕಾಗಿ ಒಮಾನ್ ಸರ್ಕಾರಕ್ಕೆ ಧನ್ಯವಾದ ತಿಳಿಸಿದ್ದಾರೆ.

_______________________

ಎರಡು ಬಾರಿ ಒಲಿಂಪಿಕ್ ವಿಜೇತೆ ಪಿ.ವಿ.ಸಿಂಧು ಹಾಗೂ ಭಾರತದ ಅಗ್ರ ಶ್ರೇಯಾಂಕದ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್‌ಶೆಟ್ಟಿ ಥೈಲ್ಯಾಂಡ್ ಓಪನ್ ಬ್ಯಾಡ್ಮಿಂಟನ್ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾರೆ. ಪಿ.ವಿ.ಸಿಂಧು ಕ್ವಾರ್ಟರ್ ಫೈನಲ್ಸ್‌ನಲ್ಲಿ ವಿಶ್ವದ ಹಾಲಿ ಚಾಂಪಿಯನ್ ಜಪಾನಿನ ಅಕಾನೆ ಯಾಮಗುಚಿ ಅವರನ್ನು ಎದುರಿಸಲಿದ್ದಾರೆ.

_______________________

ಧರ್ಮಶಾಲಾದ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಐಪಿಎಲ್ ಟಿ-೨೦ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

___________ಮುಕ್ತಾಯ__________